ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

('ಟೀನಟಿಗ' ಬೇರಾಗಿ ಖಾಸಗಿ ಪ್ರಸಾರದಲ್ಲಿದ್ದ ಪತ್ರಿಕೆ.)

ರಿಜಿಸ್ಟರ್ಡ್ ನಂ.: ಕೆಆರ್ ಎನ್ ಎಸ್ — ೧೯

ಸಂಪುಟ ೧ | ಕೊಪ್ಪ ೨೭-೯-೮೨ ಭಾನುವಾರ | ಸಂಚಿಕೆ ೪ | ಬೆಲೆ ೪೦ ಪೈಸೆ

ಕಾಡಿನ ರಕ್ಷಣೆಗೆ ಪಂಚಾಯ್ತಿಗೆ ಕಳಕಳಿ;

ಇಲಾಖೆಗೆ ಅಸಡ್ಡೆ?

(ನಮ್ಮ ಪ್ರತಿನಿಧಿಯಿಂದ)

ಕಿಗ್ಗ: ಜುಲೈ ತಿಂಗಳ ಮೊದಲ ವಾರ ನಡೆದ ಮರ್ಕಲ್ ಗ್ರಾಮ ಪಂಚಾಯ್ತಿ ಅಧಿವೇಶನದಲ್ಲಿ, "ಅರಣ್ಯ ಉತ್ಪನ್ನಗಳನ್ನು ಇಲಾಖೆ ಕಂಟ್ರಾಕ್ಟ್ ಕೊಟ್ಟಾಗ [illegible]ಗೆ, ಯಾವ ಪದಾರ್ಥ ಸಂಗ್ರಹಿಸಲು ಕೊಡಲಾಗಿದೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ಸಂಬಂಧಪಟ್ಟ ಪಂಚಾಯ್ತಿಗಳಿಗೆ ಒದಗಿಸಬೇಕು" ಎಂಬುದಾಗಿ ನಿರ್ಣಯಿಸಿ, ಆ ನಿರ್ಣಯದ ಪ್ರತಿಗಳನ್ನು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಳಿಸಿಕೊಡಲಾಗಿತ್ತು. ಆದರೆ ಈವರೆಗೂ ವಿಭಾಗ ಅರಣ್ಯಾಧಿಕಾರಿಗಳಿಂದಾಗಲೀ, ಕನ್ಸರ್ವೇಟರ್‌ರಿಂದಾಗಲೀ ಉತ್ತರ ಬಂದಿಲ್ಲ.

ಆ. ೩೧ರಂದು ಇಲ್ಲಿ ನಡೆದ ಆಗಸ್ಟ್ ತಿಂಗಳ ಪಂಚಾಯ್ತಿ ಅಧಿವೇಶನದಲ್ಲಿ ಈ ಬಗ್ಗೆ ಕೆಲವು ಸದಸ್ಯರು ತೀವ್ರವಾಗಿ ಆಕ್ಷೇಪಿಸಿ, ಅರಣ್ಯ ಇಲಾಖೆಯ ಈ ನಿರ್ಲಕ್ಷ್ಯವನ್ನು ತೀವ್ರವಾಗಿ ಖಂಡಿಸಿದರು.

ಈ ಸಂಪತ್ತು ಇತ್ತೀಚೆಗೆ ಗ್ರಾಮ [illegible] ಮರಗಳ [illegible] ಬೆಳೆಸಿದ ತೋಪು, ಪದುರುಗನ ಮಳೆ ಮುಂತಾದ ಅರಣ್ಯ ಉತ್ಪನ್ನಗಳ ಅಕ್ರಮ ಸಾಗಣೆ ನಡೆದದ್ದಲ್ಲದೆ, ದುರ್ಗಮವಾದ ಪಶ್ಚಿಮ ಘಟ್ಟದ ಕಾಡುಗಳೂ ಇತ್ತೀಚೆಗೆ ನಾಶವಾಗತೊಡಗಿರುವ ಹಿನ್ನೆಲೆಯಲ್ಲಿ ಪಂಚಾಯ್ತಿ ಈ ರೀತಿ ನಿರ್ಣಯಿಸಿತ್ತೆನ್ನಬಹುದು.

ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯಕ್ಕೆ ಖಂಡನೆ

ಅಧಿವೇಶನದಲ್ಲಿ ಸದಸ್ಯರ ಆಕ್ರೋಶಕ್ಕೆ ಗುರಿಯಾದ ಇನ್ನೊಂದು ಇಲಾಖೆಯೆಂದರೆ ಲೋಕೋಪಯೋಗಿ ಇಲಾಖೆ. ಆದಕ್ಕೆ ಸೇರಿದ ಕಿಲ್ಲಾರು-ನೆಮ್ಮಾರು ರಸ್ತೆ ಸಂಪೂರ್ಣ ಕೊಳಕಲಾಗಿ, ವಾಹನ ಸಂಚಾರವಿರಲಿ, ಜನಸಂಚಾರಕ್ಕೇ ಅಪಾಯಕರವಾಗಿದೆ. ಈಚಿನ ವರ್ಷಗಳಲ್ಲಿ ಗಳ್ಳುಡಿಯ ಬಳಿ ನಂದಿನಿ ನದಿ ರಸ್ತೆಯನ್ನೂ ಕಬಳಿಸಿದ್ದು, ಜನರು ಪಕ್ಕದ ಗದ್ದೆಯೊಳಗಿಂದ ಓಡಾಡಬೇಕಾಗಿದೆ. [ಈ ಬಗ್ಗೆ ೩-೯ರ 'ಮುಂಜಾವು'ನಲ್ಲಿ ವಿವರವಾದ ಪತ್ರ ಪ್ರಕಟವಾಗಿದೆ–ಸಂ] ಈ ಬಗ್ಗೆ ಇಲಾಖೆಗೆ ಮಾಡಿದ ಮನವಿಗಳು ನಿಷ್ಫಲವಾಗಿರುವ ಬಗ್ಗೆ ಹಲವು ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನೆರೆ ಪರಿಹಾರಕ್ಕೆ ಮನವಿ

ಈಚಿನ ನೆರೆ ಹಾವಳಿಗೆ ಪರಿಹಾರ ಕೊಡುವಾಗ ೩ ಎಕರೆಯ ಮಿತಿಯನ್ನು ಸರ್ಕಾರ ಹಾಕಿದೆಯೆಂದು ಹೇಳಲಾಗುತ್ತಿದೆ. ಆದರೆ ಮಂತ್ರಿಗಳಾದ ಜೇಗಾನಿಯವರು ಏಳೂವರೆ ಎಕರೆವರೆಗೆ ಪರಿಹಾರ ಕೊಡಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಅದನ್ನೇ ಕಾರ್ಯಗತಗೊಳಿಸಬೇಕು–ಎಂದೂ ಸಭೆ ಒಂದು ನಿರ್ಣಯದಲ್ಲಿ ಸರ್ಕಾರವನ್ನು ಒತ್ತಾಯಪಡಿಸಿತು.

ಸೆ. ೧೩ರಂದು ಕೊಪ್ಪ ತಾ|| ರೈತ ಸಮಿತಿ ಸಭೆ

ಕೊಪ್ಪ: ತಾ|| ರೈತ ಸಮಿತಿಯ ಸಭೆ ಸೆ. ೧೩ರಂದು ಕೊಪ್ಪ ಅಡಿಕೆ ಬೆಳೆಗಾರರ ಸಂಘದಲ್ಲಿ ನಡೆಯಲಿದೆ. ಗಾಂಧಿ ಜಯಂತಿಯಂದು ಬೆಂಗಳೂರಿನಲ್ಲಿ ರಾಜ್ಯ ರೈತ ಸಂಘ ಏರ್ಪಡಿಸಿರುವ ರ‍್ಯಾಲಿಯಲ್ಲಿ ತಾಲ್ಲೂಕಿನ ರೈತರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವ ಬಗ್ಗೆ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಸಭೆ ಚರ್ಚಿಸಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ತಾಲ್ಲೂಕಿನ ರೈತರು ಸಭೆಗೆ ಹಾಜರಾಗಬೇಕೆಂದು ಅಧ್ಯಕ್ಷ ಹೆಚ್.ಜಿ. ಗೋವಿಂದಗೌಡರು ಮನವಿ ಮಾಡಿದ್ದಾರೆ.

"ವಿನಯವಿಲ್ಲದ ವಿದ್ಯೆ ನಿರರ್ಥಕ"-ಡಾ|ಎಸ್.ವಿ.ಎಂ.

ಹರಿಹರಪುರ: "ವಿದ್ಯೆ ವಿನಯವನ್ನು ಕಲಿಸಬೇಕು. ವಿನಯ ಬೆಳೆಯದ ಹೊರತು ಆ ವಿದ್ಯೆಗೆ ಅರ್ಥವಿಲ್ಲ; ಅದು ಕೇವಲ ಪುಸ್ತಕಗಳಿಗೆ" ಎಂಬುದಾಗಿ ಡಾ| ಎಸ್.ವಿ. ಮಲ್ಲಿಕಾರ್ಜುನ ಭಟ್ಟರು ಆ. ೩೦ರಂದು ಇಲ್ಲಿಯ ಶ್ರೀಅಭಿನವರಾಮಾನಂದ ಸರಸ್ವತೀ ಕಿರಿಯ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಂದರ್ಭದಲ್ಲಿ ಹಿತವಚನ ನೀಡುತ್ತಾ ಹೇಳಿದರು. ಇದೇ ಸಂದರ್ಭದಲ್ಲಿ ಪಿಯು ಸಿ ವಿಭಾಗದ ವಿದ್ಯಾರ್ಥಿ ಮತ್ತು ಶಿಕ್ಷಕ ವೃಂದದವರು ಅವರ ಡಾಕ್ಟರೇಟ್ ಪದವಿಗಳಿಕೆಯನ್ನು ಹೊಗಳಿ, ಸನ್ಮಾನ ಮಾಡಿದರು.

ಕಾಲೇಜು ಸಮಿತಿಯ ಕಾರ್ಯದರ್ಶಿಗಳಾದ ಜೆ. ಪಿ. ನೀಲಕಂಠ [illegible] ಪಿ. ಯು. ಸಿ. ಯಲ್ಲಿ ರ‍್ಯಾಂಕ್ ಗಳಿಸುವ ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂ. ಗಳ ಬಹುಮಾನ ಕೊಡುವ ಸ್ವಾಮೀಜಿಗಳ ನಿರ್ಧಾರವನ್ನು ಸಭೆಯಲ್ಲಿ ಘೋಷಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಎಸ್. ವಿ. ಅಡಿಗರು ಅಭಿನಂದನಾ ಭಾಷಣ ಮಾಡಿದರು. ವಿದ್ಯಾರ್ಥಿಗಳು ಲಘು ಮನರಂಜನೆಯ ಕಾರ್ಯಕ್ರಮ ನಡೆಸಿದರು.

ಸಗಣಿ ಅನಿಲ, ಜೈವಿಕ ಅನಿಲ ಸ್ಥಾವರಗಳಿಗಾಗಿ ಸಿಮೆಂಟ್ ಸೌಲಭ್ಯ

ಕೊಪ್ಪ: ತಾ|ನಲ್ಲಿ ಸಗಣಿ ಅನಿಲ ಮತ್ತು ಜೈವಿಕ ಅನಿಲ ಸ್ಥಾವರಗಳನ್ನು ಕಟ್ಟಿಸಿಕೊಳ್ಳುವವರಿಗೆ ಸಿಮೆಂಟ್ ಮತ್ತು ಹಣವನ್ನು ಸರ್ಕಾರ ಸಾಲದ ರೂಪದಲ್ಲಿ ಒದಗಿಸುತ್ತಿದ್ದು, ಅನುಕೂಲವಾದ ಸಂದರ್ಭಗಳಲ್ಲಿ ಸಬ್ಸಿಡಿ ಕೂಡ ಇರುತ್ತದೆ; ಆಸಕ್ತಿಯುಳ್ಳವರು ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ.ಬಾಲಣ್ಣಗೌಡರನ್ನು ಸಂಪರ್ಕಿಸಬಹುದು.

ನಾಗಲಾಪುರದಲ್ಲಿ ಒಟ್ಟು ೧೦ ಮಂದಿಗೆ ಜನತಾ ಮನೆ

ನಾಗಲಾಪುರದಲ್ಲಿ ಒಟ್ಟು ೧೦ ಮಂದಿಗೆ ಜನತಾ ಮನೆ ಮಂಜೂರಾಗಿರುವುದಾಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಾಲಣ್ಣಗೌಡ ತಿಳಿಸಿದ್ದಾರೆ.

ಬಾಲ ವಿಕಾಸ ಯೋಜನೆ ಸಭೆ

ಕೊಪ್ಪ: ೬ ವರ್ಷ ಕೆಳಪಟ್ಟ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಹೆಚ್ಚಿನ ಪೋಷಣೆ ನೀಡುವುದು, ರೋಗ ನಿವಾರಣೆ, ಆರೋಗ್ಯ ಶಿಕ್ಷಣ ಮುಂತಾದವುಗಳನ್ನು ಗ್ರಾಮಾಂತರದಲ್ಲಿ ಒದಗಿಸುವ ಸಲುವಾಗಿ ವಿಶ್ವಸಂಸ್ಥೆಯ ನೆರವಿನಲ್ಲಿ ಶಿಶು ಅಭಿವೃದ್ಧಿ ಸೇವೆಗಳ ಸಮಗ್ರ ಯೋಜನೆಯಾದ ಅಂಗನವಾಡಿ ಯೋಜನೆ ೧೨ ಲಕ್ಷ ರೂ. ವೆಚ್ಚದಲ್ಲಿ ಕೊಪ್ಪ ತಾ|ಗೆ ಮಂಜೂರಾಗಿದ್ದು ಕೆ. ಟಿ. ಬೋರಯ್ಯ ಯೋಜನಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರತಿ ಹಳ್ಳಿಯಲ್ಲೂ ಒಂದೊಂದು ಅಂಗನವಾಡಿ ಕೇಂದ್ರವನ್ನು ತೆರೆಯಬೇಕಾಗಿದ್ದು, ಅವಕ್ಕೆ ಬೇಕಾದ ಕಟ್ಟಡ [illegible] ಹಾಗೂ ಮಕ್ಕಳಿಗೆ ಹಂಚುವ ತಿಂಡಿ ಪದಾರ್ಥಗಳನ್ನು ತಯಾರಿಸಲು ಬೇಕಾದ ಸ್ಥಳ [illegible] ಗ್ರಾಮ ಪಂಚಾಯ್ತಿಗಳು ಒದಗಿಸಬೇಕಾಗುತ್ತದೆ.

ಈ ಸಂಬಂಧ ಕೂಲಂಕುಷವಾಗಿ ಚರ್ಚಿಸಲು ಸೆಪ್ಟಂಬರ ಗುರುವಾರ ಬೆಳಿಗ್ಗೆ ೧೧ ಗಂಟೆಗೆ ಕೊಪ್ಪ ತಾ.ಅ.ಮಂ ಕಚೇರಿಯಲ್ಲಿ, ಪಂಚಾಯ್ತಿ-ಮಹಿಳಾ-ಯುವಕ ಸಂಘಗಳ ಅಧ್ಯಕ್ಷರು ಇವರುಗಳ ಸಭೆ ಕರೆದಿರುವ ಬೋರಯ್ಯನವರು, ಸಭೆಯಲ್ಲಿ ಪಾಲ್ಗೊಂಡು ಸಲಹೆಗಳನ್ನು ಕೊಟ್ಟು ಯೋಜನೆ ಯಶಸ್ವಿಯಾಗಲು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ವೀರೇಂದ್ರಹೆಗ್ಗಡೆ ಭೇಟಿ

ಕಮ್ಮರಡಿ: ಇಲ್ಲಿನ ವಿದ್ಯಾಗಣಪತಿ ಸೇವಾ ಸಂಘದ ಅಶ್ರಯದ ಗಣೇಶೋತ್ಸವದ (ರಜತ ಮಹೋತ್ಸವ) ನಿಮಿತ್ತ ಇದೇ ಆ. ೩೦ರಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಆಗಮಿಸಿ ಭಕ್ತಾದಿಗಳಿಗೆ ಪ್ರವಚನ ನೀಡಿದರು.

ಭಂಡಿಗಡಿಯಲ್ಲಿ

ಕಮ್ಮರಡಿಯಿಂದ ಕೊಪ್ಪಕ್ಕೆ ತೆರಳುವ ಮಾರ್ಗದಲ್ಲಿ ಭಂಡಿಗಡಿಯಲ್ಲಿ ಹೆಗ್ಗಡೆಯವರನ್ನು ಪುರಜನರು ಗ್ರಾಮಾಧ್ಯಕ್ಷ ಕೆ. ಆರ್. ಕೃಷ್ಣಭಟ್ಟರ ನೇತೃತ್ವದಲ್ಲಿ ಸ್ವಾಗತಿಸಿ ಹಾರಹಣ್ಣು ಅರ್ಪಿಸಿ ಬೀಳ್ಕೊಟ್ಟರು.

ವಿದ್ಯಾಕ್ಷೇತ್ರದಲ್ಲೊಂದು ವಿಷಾದನೀಯ ಘಟನೆ:

ಮುಗ್ಧ ವಿದ್ಯಾರ್ಥಿನಿಯರೊಡನೆ ಅಶ್ಲೀಲ ವರ್ತನೆ

ಹೊಸಕೊಪ್ಪ: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಕೆ.ಟಿ. ಚಂದ್ರಶೇಖರ ಎಂಬವರನ್ನು, ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದರೆಂಬ ದೂರಿನ ಮೇರೆಗೆ [illegible] 'ನಿಯೋಜನೆ' (ಡೆಪ್ಯುಟೇಶನ್) ಮಾಡಲಾಗಿದೆಯೆಂದು ತಿಳಿದುಬಂದಿದೆ.

ಶಾಲೆಯ ವಿದ್ಯಾರ್ಥಿನಿಯರ ಜತೆ ಅಶ್ಲೀಲ ಮಾತುಗಳನ್ನಾಡುವುದು, "ನನ್ನನ್ನು ಮದುವೆಯಾಗ್ತೀಯಾ?" ಎಂದು ಅವರನ್ನು ಹಿಡಿದುಕೊಳ್ಳುವುದು [illegible] ಮುಂತಾದವು ಇವರ ಮೇಲೆ ಗ್ರಾಮಸ್ಥರ ದೂರು ಎನ್ನಲಾಗಿದೆ. ಇದೇ ಕಾರಣದಿಂದ ಬಿ. ಶೈಲಜಾ ಎಂಬ ವಿದ್ಯಾರ್ಥಿನಿ ಶಾಲೆಗೆ ಬರುವುದನ್ನು ಬಿಟ್ಟಿದ್ದಾಳೆ. [illegible] ಇವರ [illegible] ಎಂದೂ ಹೇಳಲಾಗಿದೆ.

ಪರಿಣಾಮ ಶಿಕ್ಷೆ

[illegible] ಶಿಕ್ಷಕರೂ [illegible] ಅವರನ್ನು [illegible] ಎಂಬ ಅನುಮಾನವನ್ನು [illegible] ಶಿಕ್ಷೆ [illegible] ಬಹುಮಾನವೆ [illegible] ಅಧ್ಯಾಪಕರುಗಳು [illegible] ಲಾಗಿದೆ. ([illegible])

'ಮುಂಜಾವು'ಗೆ ಜಾಹೀರಾತು ನೀಡಿ

ಕುನ್ನಿ

ಮೂಲ ಇಂಗ್ಲಿಷ್ : **CHAMELEON**

(ಶಿಕಾಫನ ರಶಿಯನ್ ಮೂಲದ ಅನುವಾದ.)

ಕನ್ನಡಕ್ಕೆ ಭಾವಾನುವಾದ : ನಾರಾಯಣ ನವಿಲೇಕರ್.

ಪೋಲೀಸ್ ಇನ್ಸ್‌ಪೆಕ್ಟರ್ ಪುಟ್ಟ ಸಿದ್ದಪ್ಪನವರು ಹೊಸ ಯೂನಿಫಾರಮ್ಮಿನಲ್ಲಿ ಗತ್ತಿನಿಂದ ಮಾರ್ಕೆಟ್ಟಿನಲ್ಲಿ ಸಾಗುತ್ತಿದ್ದರು. ಯಾರಿಂದಲೋ ವಶಪಡಿಸಿಕೊಂಡಿದ್ದ ಬುಟ್ಟಿ ತುಂಬಾ ಮಾವಿನ ಹಣ್ಣುಗಳನ್ನು ಹೊರಲಾರದೆ ಹೊತ್ತು ಮುದಿ ಪೇದೆಯೊಬ್ಬ ಹಿಂಬಾಲಿಸಿದ್ದ. ಮಾರ್ಕೆಟ್ಟಿನಲ್ಲಿ ಒಂದು ನರಪಿಳ್ಳೆಯೂ ಇರಲಿಲ್ಲ. ಅಂಗಡಿ ಮುಂಗಟ್ಟುಗಳು, ಹಸಿದ ಬಾಯಿಗಳಂತೆ ತೆರೆದು ಭಯಂಕರವಾಗಿ ದಿಟ್ಟಿಸುತ್ತಿದ್ದವು. ಒಬ್ಬ ಭಿಕ್ಷುಕನೂ ಸಹ ದೃಷ್ಟಿಗೆ ಗೋಚರವಿರಲಿಲ್ಲ. ಎಲ್ಲಾ ನಿಶ್ಯಬ್ದವಾಗಿತ್ತು.

ಇದ್ದಕ್ಕಿದ್ದಂತೆ ಪುಟ್ಟಸಿದ್ದಪ್ಪನವರ ಕಿವಿಗೆ ಕೂಗೊಂದು ಕೇಳಿಸಿತು. "ಕಚ್ತೀಯಾ ಮುಂಡೇಕುರುದೆ! ಹುಡುಗರಾ, ಹಿಡೀರಿ, **ಬಿಡಬೇಡಿ! ಹಿಡೀರಿ ಅದನ್ನ!.**"

ಅದರಹಿಂದೆಯೇ ನಾಯಿಯ ಕುಂಯ್ಯೋ ಮರ್ರ್ರೋ ಶಬ್ದವೂ ಕೇಳಿಸಿತು. ಇನ್ಸ್‌ಪೆಕ್ಟರ ಸಾಹೇಬರು ಶಬ್ದ ಬಂದ ದಿಕ್ಕಿನತ್ತ ದೃಷ್ಟಿ ಹಾಯಿಸಿದಾಗ ಕಂಡದ್ದು ಇದು: ಕಾಳಪ್ಪನ ಸೌದೆ ಅಂಗಡಿಯ ಕಡೆಯಿಂದ ನಾಯಿಯೊಂದು ಮೂರು ಕಾಲೋಟ ಹೊಡಿತು. ಹಿಂದೆಯೇ ಒಬ್ಬ ಮಧ್ಯವಯಸ್ಕ ಓಡಿಬಂದ. ಸೋಪು ಕಾಣದ ಅಂಗಿ, ಕೆಂಬಣ್ಣಕ್ಕೆ ತಿರುಗಿದ ಪಂಚೆಯ ಆತ ಓಡುವ ಭರದಲ್ಲಿ ಎಡವಿ ನಾಯಿಯೆಡೆ ಕೈ ಚಾಚಿದಾಗ ಸಿಕ್ಕಿದ್ದು ಅದರ ಹಿಂಗಾಲು. ಮತ್ತೆ 'ಕುಂಯ್ಯೋ ಮರ್ರ್ರೋ'. ಮತ್ತೆ 'ಹಿಡೀರಿ, ಹಿಡೀರಿ' ಕೂಗಾಟ. ನಿದ್ದೆಬಡುಕ ಮುಖಗಳು ಅಂಗಡಿಗಳಿಂದ ಇಣುಕಿದವು. ಕೆಲ ಕ್ಷಣಗಳಲ್ಲಿಯೇ ಸೌದೆ ಅಂಗಡಿಯ ಹತ್ತಿರ ಸಣ್ಣ ಗುಂಪು ಉದ್ಭವವಾಯಿತು.

"ಪಬ್ಲಿಕ್‌ಗೆ ತೊಂದರೆ ಆಗಿದೇಂತ ಕಾಣುತ್ತೆ ಸಾರ್" ಅಂದ ಕಾನ್‌ಸ್ಟೇಬಲ್

ಸಾಹೇಬರು ಜನರ ಗುಂಪಿನತ್ತ ಗಂಭೀರನಾಗಿ ನಡೆದರು ಸೌದೆ ಅಂಗಡಿಯ ಮುಂದೆ ನೋಡಿದರೆ ಏನಿದೆ! ಗುಂಡಿ ಬಿಚ್ಚಿದ ಶರಟಿನಲ್ಲಿ, ಅರೆಬಿಚ್ಚಿ ನೆಲ ಒರೆಸುತ್ತಿದ್ದ ಪಂಚೆಯಲ್ಲಿ, ಬಲಗೈ ತೋರುಬೆರಳನ್ನು ಎತ್ತಿ ಹಿಡಿದು ತೋರಿಸುತ್ತಾ ನಿಂತಿರುವುದು ಅವರ ಕಣ್ಣಿಗೆ ಬಿತ್ತು ಅವನ ತೋರು ಬೆರಳಿನಿಂದ ರಕ್ತ ಒಸರುತ್ತಿತ್ತು. "ನಿನ್ನ ತಿಥಿ ಮಾಡ್ತೀನಿ ಈಗ" ಅನ್ನುವ ಭಾವದಲ್ಲಿ ಅವನ ಕಣ್ಣುಗಳು ನಾಯಿಯತ್ತ ಉಗ್ರನೋಟ ಬೀರಿದವು. ಸಾಹೇಬರಿಗೆ ಅದು ಸೌದೆ ಅಂಗಡಿ ಕಾಳಪ್ಪ ಎಂದು ಗುರುತು ಹತ್ತಿತು. ಈ ಜನ ಸಮೂಹದ ಮಧ್ಯದಲ್ಲಿ ಮುಂದಿನ ಕಾಲುಗಳನ್ನು ಅಗಲವಾಗಿ ಚಾಚಿ ಕೊಂಡು ಅಪರಾಧಿ ಕುಳಿತಿತ್ತು; ಚೂಪು ಮೂತಿಯ ಮಣ್ಣು ಬಿಳಿ ಬಣ್ಣದ ಹಂಡ ಬಂಡ ಕುನ್ನಿ.

"ಏನು ಗಲಾಟೆ?" ಇನ್ಸ್‌ಪೆಕ್ಟರ್ ಸಾಹೇಬರು ಜನರನ್ನು ಸರಿಸಿ ದಾರಿ ಮಾಡಿಕೊಂಡು ಮುಂದೆ ಬರುತ್ತಾ ಪ್ರಶ್ನಿಸಿದರು. "ಇಲ್ಲೇನು ನಡೆಸಿದ್ದೀ? ಕೈ ಯಾಕೆ ಎತ್ತಿಕೊಂಡಿದೀಯ? ಯಾರದು ಕೂಗಿದ್ದು?"

"ನನ್ನಷ್ಟಕ್ಕೆ ನಾನು ನಡೆದುಕೊಂಡು ಹೋಗ್ತಾ ಇದ್ದೆ ಮಹಾಸ್ವಾಮಿ" ಶುರು ಮಾಡಿದ ಕಾಳಪ್ಪ, "ಆವಾಗ ಇದ್ದಕ್ಕಿದ್ದಂತೆ ಈ ಶನಿ ಬಂದು ಕೈ ಬೆರಳಿಗೆ ಬಾಯಿ ಹಾಕಿತು. ಕೈಯಿಂದಲೇ ಹೊಟ್ಟೆ ಹೊರೆಯುವ ಬಡವ ಸ್ವಾಮಿ ನಾನು. ದಯವಿಟ್ಟು ನನಗೆ ಪರಿಹಾರ ಕೊಡಿಸಬೇಕು. ಎಲ್ಲರೂ ಹೀಗೆ ಕಚ್ಚಲಿಕ್ಕೆ ಶುರುಮಾಡಿದರೆ ಬದುಕಿನಲ್ಲಿ ಏನಿರುತ್ತೆ ಸ್ವಾರಸ್ಯ?....

"ಹುಂ, ಆಗಲಿ, ಆಗಲಿ" ಹುಬ್ಬು ಮೇಲೇರಿಸಿ ಸಾಹೇಬರು ಹೂಂಕರಿಸಿದರು. "ಯಾರ ನಾಯಿ ಇದು? ಇದನ್ನು ಇಷ್ಟಕ್ಕೇ ಬಿಡೋ ಹಾಗಿಲ್ಲ. ನಾಯಿಗಳನ್ನು ಈ ರೀತಿ ಬಿಡಾಡಿ ಬಿಡುವ ಜನಕ್ಕೆ ಬುದ್ಧಿ ಕಲಿಸಬೇಕು. ಬದಮಾಷ್, ಅವನಿಗೆ ತೋರಿಸ್ತೀನಿ ಕಾನೂನು ಮುರಿದರೆ ಏನಾಗುತ್ತೆ ಅಂತ. ಹುಡುಗಾಟ ಅಂತ ತಿಳಿದಿದ್ದಾನೋ? ದಂಡ ಕಕ್ಕಿಸ್ತೀನಿ", ಜಬರದಸ್ತು ಮುಂದುವರಿಸಿದ ಸಾಹೇಬರು, ಪಕ್ಕದಲ್ಲಿದ್ದ ಪೇದೆಯತ್ತ ತಿರುಗಿ ಹೇಳಿದರು: "ಪೀಸಿ,ಯಾರ ನಾಯಿ ಇದು ಅಂತ ಪತ್ತೆ ಮಾಡಿ ಕಂಪ್ಲೇಂಟು ತಯಾರು ಮಾಡು. ಈ ನಾಯಿಗೆ ಹುಚ್ಚಿದ್ದರೂ ಇರಬಹುದು ತಕ್ಷಣ ಇದನ್ನು ಮುಗಿಸಿಬಿಡಬೇಕು. ಯಾರದ್ದಿದು ನಾಯಿ ಯಾರಿಗಾದರೂ ಗೊತ್ತಿದೆಯಾ?"

"ಮಾದಪ್ಪನವರದ್ದು ಇದ್ದ ಹಾಗಿದೆ" ಜನಸಮೂಹದಿಂದ ಒಂದು ಧ್ವನಿ ಬಂತು.

"ಮಾದಪ್ಪ! ಯಾರು? ಎಂ.ಎಲ್.ಎ. ಮಾದಪ್ಪನವರಾ? ಪಿ.ಸಿ., ಎಲ್ಲಿ, ಈ ಟೋಪಿ, ಕೋಲು ಹಿಡಿದುಕೋ. ಶರಟಿನ ಗುಂಡಿ ಬಿಚ್ಚಿಕೋತೀನಿ ಅಬ್ಬಾ! ಏನು ಸೆಕೆ. ಮೈಯೆಲ್ಲಾ ಬೆವರುತ್ತಾ ಇದೆ. ಮಳೆ ಬರುತ್ತೋ ಏನೋ" ಕಾಳಪ್ಪನ ಕಡೆ ತಿರುಗಿ ಸಾಹೇಬರು ಹೇಳಿದರು "ನೆಟ್ಟಗೆ ಒಂದು ಅಡಿಯೂ ಇಲ್ಲದ ಈ ಕುನ್ನಿ ಮರಿಗೆ ನಿನ್ನ ಕೈ ಹ್ಯಾಗಯ್ಯಾ ಎಟಕುತ್ತೆ? ಮೊಳೆ ಹೊಡೆಯೋ ಹೊತ್ತಿಗೆ ಕೈ ಬೆರಳ ಮೇಲೆ ಸುತ್ತಿಗೆ ಹಾಕಿಕೊಂಡಿರಬೇಕು. ಅದರಲ್ಲೂ ದುಡ್ಡು ಮಾಡುವ ದುರ್ಬುದ್ಧಿ! ಹಾಂ, ಇಂಥಾ ಆಟ ಎಷ್ಟೋ ನೋಡಿದೀನಿ."

"ಅದರ ಮೂತಿಗೆ ಉರಿಯೋ ಸಿಗರೇಟಿನ ತುದಿ ಚುಚ್ಚಿದ ಸಾರ್; ಅದಕ್ಕೆ ಅದು ಕಚ್ಚಿದ್ದು. ಇಲ್ಲದೇ ಇದ್ದರೇ ಅದ ಒಳ್ಳೇ ನಾಯೀನೇ. ಈ ಕಾಳಪ್ಪ ಯಾವಾಗಲೂ ಹೀಗೇ, ಬರೀ ದುರ್ಬುದ್ಧಿ" ಗುಂಪಿನಿಂದ ಒಂದು ಸಮಜಾಯಿಷಿ ಬಂದಿತು.

"ಸುಳ್ಳು ಬೊಗಳಬೇಡ! ನೋಡಿದವನ ಹಾಗೆ ಮಾತಾಡ್ತೀಯಲ್ಲ. ಸಾಹೇಬರು ಬುದ್ಧಿವಂತರು. ಯಾರದ್ದು ಸುಳ್ಳು ಯಾರದ್ದು ನಿಜ ಅನ್ನೋದು ಅವರಿಗೆ ಚೆನ್ನಾಗಿ ಗೊತ್ತಾಗುತ್ತೆ. ಕಾನೂನಿನ ಮುಂದೆ ಎಲ್ಲಾರೂ ಒಂದೇ. ನಿನಗೆ ಗೊತ್ತಿಲ್ಲ ಅಂತ ಕಾಣುತ್ತೆ, ನನ್ನ ತಮ್ಮನೂ ಒಬ್ಬ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಇದಾನೆ...." ಕಾಳಪ್ಪನ ಮಾತನ್ನು ಅರ್ಧಕ್ಕೆ ತುಂಡರಿಸಿ ಸಾಹೇಬರು ಗುಡುಗಿದರು:

"ಎದುರು ಉತ್ತರ ಕೊಡಬೇಡ"

"ಇದು ಮಾದಪ್ಪನವರ ನಾಯಿ ಅಲ್ಲ ಸಾರ್" ಪೇದೆ ಖಚಿತವಾಗಿ ಉತ್ತರಿಸಿದ "ಅವರ ಹತ್ತಿರ ಇಂಥಾ ನಾಯೀನೇ ಇಲ್ಲ. ಎಲ್ಲಾ ಜಾತಿ ನಾಯೀನೇ ಇರೋದು ಸಾರ್"

"ನಿನಗೆ ಸರಿಯಾಗಿ ಗೊತ್ತಾ?"

"ಹೌದು ಸಾರ್"

"ಸರಿ, ಸರಿ. ಮಾದಪ್ಪನವರ ನಾಯಿಗಳೆಲ್ಲಾ ದುಬಾರಿ ಜಾತಿನಾಯಿಗಳು. ಇದರ ಮೂತಿನೋಡು ಅನ್ನಾ ಕಂಡು ಎಷ್ಟು ದಿನಾ ಆಯಿತೊ! ಇಂಥಾನಾಯೀನ ಯಾವೋನು ಸಾಕ್ತಾನೆ? ಹುಚ್ಚೆ? ಇಂಥಾ ನಾಯಿ ಡೆಲ್ಲಿ, ಬಾಂಬೆ ಕಡೆ ಇದ್ದರೆ ಏನು ಮಾಡ್ತಾರೆ ಗೊತ್ತಾ? ಕಾನೂನು–ಗೀನೂನು ಮುಲಾಜು ನೋಡದೆಖತಂ ಮಾಡಿ ಬಿಡ್ತಾರೆ, ಖತಂ. ಕಾಳಪ್ಪ, ನೀನೇನೂ ಹೆದರಬೇಡ. ನಾಯಿ ಮಾಲೀಕನ ಹತ್ತಿರ ಕಕ್ಕುಸ್ತೀನಿ. ಬ.... ಮಗನಿಗೆ ಪಾಠ ಕಲಿಸ್ತೀನಿ."

"ಮಾದಪ್ಪನವರದ್ದೇ ಇದ್ದರೂ ಇರಬಹುದು, ಸಾರ್" ಪೇದೆ ಯೋಚನೆ ಮಾಡುತ್ತಾ ಉದ್ಗಾರ ತೆಗೆದ, "ಅದನ್ನ ನೋಡಿದರೆ ಹಂಗೆ ಕಾಣುತ್ತೆ. ಅವರ ಬಂಗಲೆ ಹಿಂದುಗಡೇಲಿ ಇಂಥದೇ ಒಂದು ನಾಯಿ ನೋಡಿದ್ದೆ."

"ಹುಂ ಪಿ.ಸಿ. ಎಲ್ಲಿ ಆ ಮಫ್ಲರ್ ಕೊಡು ಏನು ತಣ್ಣಗೆ ಗಾಳಿ ಹೊಡೀತಿದೆ. ಚಳಿಗೆ ಮೈಯೆಲ್ಲಾ ಥರಥರ ಅಂತಿದೆ. ಮಾದಪ್ಪನವರ ಮನೆಗೆ ಈ ನಾಯಿ ತಗೊಂಡು ಹೋಗಿ ಕೊಟ್ಟುಬಾ. ನಾನು ಹುಡುಕಿ ಕಳಿಸಿದೆ ಅಂತ ಹೇಳು. ಇನ್ನು ಮುಂದೆ ಹೀಗೆಲ್ಲಾ ಅಲೆಯೋಕೆ ಬಿಡಬಾರದಂತೆ ಅಂತ ಹೇಳು. ಒಳ್ಳೇ ಜಾತಿ ತಳಿ ಇದ್ದರೂ ಇರಬಹುದು. ಹೀಗೆ ಎಲ್ಲಾ ಬೇವಾರ್ಸಿಗಳೂ ಮೂತಿಗೆ ಸಿಗರೇಟು ಚುಚ್ಚಿದರೆ ಪಾಪ, ಹಾಳಾಗಿ ಹೋದೀತು. ನಾಯಿ ಭಾರೀ ಸೂಕ್ಷ್ಮದ ಪ್ರಾಣಿ. ಕೈ ಕೆಳಗೆ ಬಿಡೋ ಬದಮಾಷ್, ನಿನ್ನ ಆ ದರಿದ್ರ ಬೆರಳನ್ನ ದಸರಾ ಬೊಂಬೆ ತರಹಾ ಪ್ರದರ್ಶನ ಮಾಡಬೇಡ. ನಿಂದೇ ತಪ್ಪು"

"ಮಾದಪ್ಪನವರ ಮನೆ ಅಡಿಗೆಯವನೇ ಬರ್‍ತಿದಾನೆ. ಅವನನ್ನೇ ಕೇಳೋಣ. ಏ, ಕರಿಯಾ, ಬಾ ಇಲ್ಲಿ! ಈ ನಾಯಿ ನೋಡು, ನಿಮ್ಮೆಜಮಾನರದ್ದಾ ಇದು?"

"ಏನು ಈ ಕುನ್ನೀನೇ? ಇಂಥಾದ್ದು ನಮ್ಮ ಅಯ್ಯನವರ ಹತ್ತಿರ ಯಾವಾಗಲೂ ಇರಲಿಲ್ಲ"

"ಹೆಚ್ಚಿಗೆ ವಿಚಾರಿಸೋದು ಬೇಕಿಲ್ಲ" ಪುಟ್ಟ ಸಿದ್ದಪ್ಪನವರು ಹೇಳಿದರು "ಯಾವುದೋ ಕಂತ್ರಿ ನಾಯಿ ಇದು. ಇನ್ನೂ ಯಾಕೆ ನಿಂತಿದೀರಿ ಇಲ್ಲಿ. ಹೇಳಲಿಲ್ಲವೇ, ಕಂತ್ರಿ ನಾಯಿ ಅಂತ. ತಗೊಂಡ್ಹೋಗಿ ಕಥೆ ಮುಗಿಸು"

"ಇದು ನಮ್ಮ ನಾಯಿ ಅಲ್ಲ," ಕರಿಯ ಮುಂದುವರಿಸಿದ- "ನಮ್ಮ ಯಜಮಾನರ ತಮ್ಮಂದು. ಒಂದು ವಾರದ ಕೆಳಗೆ ಬಂದವ್ರೆ. ನಮ್ಮೆಜಮಾನರಿಗೆ ಇಂಥಾ ಕಂತ್ರಿಗಳಲ್ಲಿ ಇಷ್ಟ ಇಲ್ಲ. ಅದೇ ಅವರ ತಮ್ಮನಿಗೆ ಹೇಳಿ. ಎಂಥಾ........"

"ಯಾರು ಸೋಮಯ್ಯನವರೇ?" ಪುಟ್ಟ ಸಿದ್ದಪ್ಪನವರಿಗೆ ಹರ್ಷಾತಿರೇಕದಿಂದ ಮಾತೇ ಹೊರಡಲಿಲ್ಲ. "ಒಳ್ಳೇ ತಮಾಷೆ ಆಯಿತಲ್ಲ!. ನನಗೆ ಗೊತ್ತೇ ಇರಲಿಲ್ಲ. ಇನ್ನೂ ಅಷ್ಟು ದಿನ ಇರ್‍ತಾರಾ ಇಲ್ಲೇ?"

"ಹೌದು"

(೩ ನೇ ಪುಟಕ್ಕೆ)

ಆ್ಯಂಟನ್ ಶಿಕಾಫ್ (Anton Chekov) ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬಾಳಿದ, ರಶಿಯಾದ ಪ್ರಸಿದ್ಧ ಕತೆಗಾರ; ನಾಟಕಕಾರ. ಸರಳತೆಯಲ್ಲಿ; ನೇರವಾಗಿ ಕಥೆ ಹೇಳುವ ವಿಧಾನದಲ್ಲಿ ಪ್ರೇಮಚಂದರನ್ನು ನೆನಪಿಗೆ ತರುವ ಈತನ ಕಥೆಗಳು ತಮ್ಮ ಸಾರ್ವಕಾಲಿಕ ಗುಣದಿಂದಾಗಿ ಇಂದಿಗೂ ಹೊಚ್ಚ ಹೊಸತಾಗಿ ತೋರುತ್ತವೆ.

ಈ ಕಥೆಯನ್ನು ಶಿಕಾಫ್ ಬರೆದದ್ದು ಸುಮಾರು ಒಂದುನೂರು ವರ್ಷದ ಹಿಂದೆ. ಆದರೂ ನಮ್ಮ ಪ್ರಸಕ್ತ ರಾಜಕೀಯದಲ್ಲಿ ನಾವು ಕಾಣುತ್ತಿರುವ; ಕಂಡು ರೋಸಿರುವ ಹೊಗಳು ಭಟ್ಟಂಗಿತನ, ಭ್ರಷ್ಟಾಚಾರ, ಅಧಿಕಾರದಲ್ಲಿರುವವರ ಬೂಟು ನೆಕ್ಕುವ ಪ್ರವೃತ್ತಿ–ಇವುಗಳಿಗೆಲ್ಲ ಕನ್ನಡಿ ಹಿಡಿಯುವಲ್ಲಿ ಈ ಕಿರುಗತೆ ಆಶ್ಚರ್ಯವಾಗುವ ಮಟ್ಟಿಗೆ ಯಶಸ್ವಿಯಾಗಿದೆ ಹಾಗೂ ಶಿಕಾಫನ ಕಥಾವಸ್ತುಗಳ ಸಾರ್ವಕಾಲಿಕತೆಗೆ ಸಾಕ್ಷಿಯಾಗಿದೆ.

ಇಂಗ್ಲಿಷಿನಿಂದ ಕನ್ನಡಕ್ಕೆ ಭಾವಾನುವಾದ ಮಾಡಿದ ನಾರಾಯಣ ನವಿಲೇಕರ್ ಕೊಪ್ಪದವರು. ಈಗ ಮದ್ರಾಸಿನಲ್ಲಿ ಎಂ.ಟೆಕ್. ಓದುತ್ತಿದ್ದಾರೆ.

ಒಂದೇ ಜನದ ದೇಶ

ಒಂದೇ ಜನದ ದೇಶ ಬೇಗ ಹುಟ್ಟುವಂತೆ ಆಗಲಿ
ಜಾತಿ ಎಂಬ ಭೂತ ಬೇಗ ದೂರ ಸರಿದು ಹೋಗಲಿ
ದೇಶಭಕ್ತಿ ಬೆಳೆದು ಬರಲಿ ದ್ರೋಹ ಅಳಿದು ಹೋಗಲಿ
ಜಗದ ಶಾಂತಿ ಜಗ್ಗದಿರಲಿ ಸುಖದ ಹೂವು ಅರಳಲಿ
ದ್ವೇಷ ರೋಷ ಆಸೆ ಮೋಸ ಹರಿದು ದೂರ ಹೋಗಲಿ
ಒಂದೇ ಜನರ ದೇಶ ಬೇಗ ಮೂಡುವಂತೆ ಆಗಲಿ

ನೆಲ, ಜಲ, ಮುಗಿಲು, ಗಾಳಿ ಎಲ್ಲಾ ದೇವ ಸೃಷ್ಟಿಯು
ನಮ್ಮ ನಮ್ಮಲೇಕೆ ಜಗಳ ಎಲ್ಲಾ ಮರಣಾಧೀನರು
ಸುಖವು ಹಂಚಿ ಹೋಗಬೇಕು ಎಲ್ಲರಲ್ಲು ಸರಿ ಸಮ
ದೇಶ ಎದ್ದು ನಿಲ್ಲಬೇಕು ನೆರೆಯವರಿಗೆ ಸಮ ಸಮ

–ಎಂ. ಮಂಜುನಾಥ, ಏಳನೇ ತರಗತಿ.

ಓದುಗರ ಪತ್ರ

ಕತ್ತನ್ನು ಕುಯ್ಯುವ ಶಾಸನ ರದ್ದಾಗಲಿ

ಮಾನ್ಯರೆ,

ಬಿಹಾರ ಸರ್ಕಾರ ಪತ್ರಿಕಾ ಸ್ವಾತಂತ್ರ್ಯವನ್ನು ಕಿತ್ತು ಕತ್ತನ್ನು ಕುಯ್ಯುವ ಕರಾಳ ಶಾಸನವನ್ನು ಜಾರಿಗೆ ತರಲು ಪ್ರಯತ್ನಿಸಿದೆ. ಇಂತಹ ಹೀನ ಶಾಸನವನ್ನು ಹಿಂತೆಗೆದುಕೊಳ್ಳಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಗ್ರಹಪಡಿಸುತ್ತದೆ. ಅಲ್ಲದೆ ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟಕ್ಕೆ ಸಮಿತಿ ಬೆಂಬಲ ಸೂಚಿಸುತ್ತದೆ. ದಿನನಿತ್ಯ ದಲಿತರ, ರೈತ ಕಾರ್ಮಿಕರ ಕೊಲೆಯ ಜೂಜಾಟದಲ್ಲಿ, ಭ್ರಷ್ಟಾಚಾರದಲ್ಲಿ ಅಧಿಕಾರ ನಡೆಸುತ್ತಿರುವ ಬಿಹಾರ ಸರ್ಕಾರ ಕೊಲೆ, ದಬ್ಬಾಳಿಕೆ, ಭ್ರಷ್ಟಾಚಾರಗಳನ್ನು ತಡೆಗಟ್ಟಲು ವಿಫಲಗೊಂಡಿದೆ. ದಿನನಿತ್ಯ ನಡೆಯುತ್ತಿರುವ ಅನ್ಯಾಯಗಳ ಸರಮಾಲೆಯನ್ನು ಜನಸಾಮಾನ್ಯರಿಗೆ ತಿಳಿಸುತ್ತಿರುವ ಪತ್ರಿಕೆಗಳ ಮೇಲೆ ಕರಾಳ ಶಾಸನವನ್ನು ಹೇರುವುದು ತೀರಾ ಖಂಡನೀಯ ಸಂಗತಿ. ಇಂತಹ ಪರಿಸ್ಥಿತಿಯಲ್ಲಿ ಪ್ರಧಾನಿ, ರಾಷ್ಟ್ರಾಧ್ಯಕ್ಷರು ಮಧ್ಯ ಪ್ರವೇಶಿಸಿ ಕರಾಳ ಶಾಸನವನ್ನು ರದ್ದುಪಡಿಸದಿದ್ದರೆ ಇಡೀ ಜನತೆಯ ಆಂದೋಲನವನ್ನು ಎದುರಿಸಬೇಕಾಗುತ್ತದೆ. ಸ್ವಾರ್ಥ ಸಾಧನೆಯ ಕಾರಣಕ್ಕಾಗಿ ಜನತೆಯನ್ನು ಬಲಿಕೊಡುವ ಬದಲು ಜನತೆಯ ಅಭಿಪ್ರಾಯ ರಕ್ಷಣೆಗೆ ಸರ್ಕಾರ ಮುಂದಾಗುವುದು ತೀರಾ ಅಗತ್ಯ.

"ಪುಂಡರನ್ನು ದಂಡಿಸಿ"

ಕಳೆದ ತಿಂಗಳು ಹಾಸನದ "ಜನತಾ ಮಾಧ್ಯಮ" ದಿನಪತ್ರಿಕೆಯ ಕಛೇರಿಯ ಮೇಲೆ ಅಲ್ಲಿನ ಪುಂಡರು ನಡೆಸಿರುವ ಹಲ್ಲೆ ತೀರಾ ಮೂರ್ಖತನದಿಂದ ಕೂಡಿದೆ. ಪತ್ರಿಕೆಗಳ ತಪ್ಪುಧೋರಣೆಗಳನ್ನು ಬಯಲು ಮಾಡಲು **ಹಲವಾರು ಕಾನೂನು ಮಾರ್ಗಗಳಿವೆ. ಅವನ್ನು ಬಿಟ್ಟು ಈ ರೀತಿ ಹಲ್ಲೆ ಮಾಡುವುದು ಹೇಡಿತನವನ್ನು ಎತ್ತಿ ತೋರಿಸುತ್ತದೆ.**

ದಲಿತರ, ರೈತ-ಕಾರ್ಮಿಕರ ಹೋರಾಟಗಳನ್ನು ಮತ್ತು ಭ್ರಷ್ಟಾಚಾರದ ಅವ್ಯವಸ್ಥೆಯನ್ನು ಬಯಲು ಮಾಡುತ್ತಿರುವ ಪತ್ರಿಕೆಗಳ ರಕ್ಷಣೆಗೆ ಜನಸಾಮಾನ್ಯರು ಮುಂದಾಗಬೇಕೆಂದು ಸಮಿತಿ ಕರೆ ನೀಡುತ್ತದೆ. ಅಲ್ಲದೆ, ಹಲ್ಲೆ ಮಾಡುವ ಪುಂಡರನ್ನು ದಂಡಿಸಿ ಉಗ್ರಶಿಕ್ಷೆ ನೀಡಬೇಕೆಂದು ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ.

—ಎಂ. ಡಿ. ಗಂಗಯ್ಯ,
ರಾಜ್ಯ ಸಂಚಾಲಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಚಿಕ್ಕಮಗಳೂರು.

'ಮುಂಜಾವು'ಗೆ
ಚಂದಾದಾರರಾಗಿರಿ

ಮೋರಿ ಶಿಥಿಲವಾಗಿದೆ

ಶೃಂಗೇರಿ: ಸಮೀಪದ ಆನೆಗುಂದದ ಬಳಿ ಶೃಂಗೇರಿ-ಕೊಪ್ಪ ರಸ್ತೆಯಲ್ಲಿ ಒಂದು ಮೋರಿ ಬಹಳ ಶಿಥಿಲವಾಗಿದ್ದು, ರಸ್ತೆಗೆ ತೀವ್ರ ಅಪಾಯವಾಗುವ ಸಂಭವವಿದೆ. (ಬೇಕಾದರೆ ಗ್ರಾಮದ ಗಣ್ಯರ ಸಲಹೆ ಪಡೆಯಲಿ) ಒಳಗಿನಿಂದ ಕಟ್ಟು ಕುಸಿದು ಇಕ್ಕಟ್ಟಾಗಿದ್ದು, ಹಳ್ಳ ತುಂಬಿದಾಗ ನೀರು ಪಕ್ಕದ ದಂಡೆ ಒಡೆದು ಗದ್ದೆಯ ಮೇಲೆ ನುಗ್ಗುತ್ತಿದೆ. ಮೋರಿಯ ಒಂದು ಕಡೆಯ ಕೈಪಿಡಿಯೂ ಬಿದ್ದು ಹೋಗಿದ್ದು, ಒಳಗಿನಿಂದ ಕಟ್ಟು ಇನ್ನೂ ಜರಿಯುತ್ತಲೇ ಇದೆ. ಯಾವ ಘಳಿಗೆಯಲ್ಲಾದರೂ ರಸ್ತೆಗೆ ಅಪಾಯವಾಗಬಲ್ಲ ಈ ಮೋರಿಯ ರಿಪೇರಿಯನ್ನು ತುರ್ತಾಗಿ ಕೈಗೊಳ್ಳಬೇಕೆಂದು ಗ್ರಾಮಸ್ಥರು ಕೇಳುತ್ತಿದ್ದಾರೆ.

ಕುನ್ನಿ

(೨ನೇ ಪುಟದಿಂದ)

"ಎಷ್ಟು ದಿನ ಆಯಿತು ಅವರನ್ನ ನೋಡಿ! ನೋಡಬೇಕು ಅಂತ ಅಂದುಕೊಳ್ತಿದ್ದೆ. ಬಂದಿದ್ದೇ ಗೊತ್ತಾಗಲಿಲ್ಲವಲ್ಲ! ಅಂದ ಹಾಗೆ ಇದು ಅವರ ನಾಯೋ? ತುಂಬಾ ಸಂತೋಷ! ತಗೊಂಡು ಹೋಗು. ಏನು ಮಜಬೂತಾದ ನಾಯಿ! ಇದು ಎಲ್ಲಾದರೂ ಯಾರಿಗಾದರೂ ಕಚ್ಚೋದೇ! ಛೆ, ಛೆ, ಹೆದರಿಕೋಬೇಡ, ಪಾಪ ಸಿಟ್ಟು ಬಂದಿದೆ. ಎಷ್ಟು ಮುದ್ದಾಗಿದೆ ಮರಿ!"

ಕರಿಯ "ಕ್ರೂ ಕ್ರೂ" ಎಂದು ಕರೆಯುತ್ತಾ ಹೋದಂತೆ ಮರಿ ಬಾಲ ಅಲ್ಲಾಡಿಸುತ್ತಾ ಹಿಂದೆ ಹೋಯಿತು. ಜನ ಕಾಳಪ್ಪನ ಕಡೆ ತಿರುಗಿ ಹಲ್ಲು ಕಿರಿದರು.

"ನಿನ್ನ ನೋಡಿಕೋತೀನಿ" ಸಾಹೇಬರು ಕಾಳಪ್ಪನ ಕಡೆ ಅಬ್ಬರಿಸಿ ಮಫ್ಲರ್ ತೆಗೆದು ಪಿ. ಸಿ. ಗೆ ಕೊಡುತ್ತಾ ಗಂಭೀರವಾಗಿ ಮುಂದೆ ನಡೆದರು.

ಬೇಗಾರು ಸರ್ಕಾರಿ ಆಸ್ಪತ್ರೆಯ ವೈದ್ಯರ ವಿರುದ್ಧ

ಮಹಿಳಾ ರೋಗಿಯೊಂದಿಗೆ ಅಸಭ್ಯ ವರ್ತನೆಯ ಆರೋಪ

ಬೇಗಾರು: ಕೆಲವು ದಿನಗಳ ಹಿಂದೆ ಇಲ್ಲಿನ ಸರ್ಕಾರಿ ಆಸ್ಪತ್ರೆಯ ವೈದ್ಯರು ಆಸ್ಪತ್ರೆಗೆ ದಾಖಲಾಗಿದ್ದ ಗರ್ಭಿಣಿಯೊಬ್ಬರ ಜೊತೆ ಅಸಭ್ಯವಾಗಿ ವರ್ತಿಸಿದರೆಂದು ಆರೋಪಿಸಲಾಗಿದೆ.

ಉಳುವಮುಡಿ ಶ್ರೀನಿವಾಸ ಎಂಬವರು ನಮ್ಮ ಪತ್ರಿಕೆಗೆ ಕಳಿಸಿರುವ ದೂರಿನಲ್ಲಿ, ಆ. ೪ ರಂದು ತಮ್ಮ ೫ ತಿಂಗಳ ಗರ್ಭಿಣಿ ಹೆಂಡತಿಯನ್ನು ಹೊಟ್ಟೆನೋವು ಮತ್ತು ವಾಂತಿಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಿಕೊಂಡ ವೈದ್ಯರು ಮಧ್ಯಾಹ್ನ ತಮ್ಮನ್ನು ಸಿಗರೇಟು ಅಂಗಡಿಗೆ ಹೋಗಿಬರಲು ಕಳಿಸಿ, ಆಸ್ಪತ್ರೆಯಲ್ಲಿ ಬೇರಾರೂ ಇಲ್ಲದಿದ್ದ ಆ ಸಮಯದಲ್ಲಿ ತಮ್ಮ ಪತ್ನಿಯೊಂದಿಗೆ ಅಸಭ್ಯವಾಗಿ ನಡೆದುಕೊಳ್ಳಲು ಯತ್ನಿಸಿದರೆಂದು ಆರೋಪಿಸಿದ್ದಾರೆ.

ಅಂಗಡಿಯಿಂದ ಹಿಂದೆ ಬಂದಾಗ ತಮ್ಮ ಹೆಂಡತಿ ವಾರ್ಡಿನಿಂದ ರಸ್ತೆಗೆ ಓಡಿಬಂದಿದ್ದು, ವಿಷಯ ತಿಳಿದ ತಾವು ಕೋಪ, ಅವಮಾನಗಳಿಂದ ಡಾಕ್ಟರಿಗೆ ಛೀಮಾರಿ ಹಾಕಿ ಸಮಜಾಯಿಷಿ ಕೇಳಿದಾಗ ಅವರು ಉತ್ತರಿಸದೆ ಒಳಗೇ ಕೂತಿದ್ದರು; ಹೆಂಡತಿಯನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಕೂಡ ಮಾಡಿಸಿಕೊಳ್ಳದೆ ಮನೆಗೆ ಕರೆದುಕೊಂಡು ಹೋದೆ ಎಂದೂ ಶ್ರೀನಿವಾಸ್ ತಿಳಿಸಿದ್ದಾರೆ.

"ವೈದ್ಯರೆಂದರೆ ತಂದೆಗೆ ಸಮಾನ. ಆದರೆ ಇವರು ಇಂಥವರಾದರೆ ಮರ್ಯಾದಸ್ಥ ಹೆಣ್ಣು ಮಕ್ಕಳು ಆಸ್ಪತ್ರೆಗೆ ಬರುವುದು ಹೇಗೆ?" ಎಂದು ಪ್ರಶ್ನಿಸಿರುವ ಶ್ರೀನಿವಾಸ್, "ಇಂಥ ಅಪಾಯಕಾರಿ ವೈದ್ಯರಿಂದ ಬಡ ಹಳ್ಳಿಗರಿಗೆ ರಕ್ಷಣೆ ದೊರಕಿಸಬೇಕೆಂದು ಅಧಿಕಾರಿಗಳನ್ನು ಕೋರಿದ್ದಾರೆ.

ಊರಲ್ಲಿ ದೊರೆತ ಮಾಹಿತಿ

ಈ ಬಗ್ಗೆ 'ಮುಂಜಾವು' ಪ್ರತಿನಿಧಿ ತನಿಖೆ ನಡೆಸಿದಾಗ, ಆ ದಿನ ಮಧ್ಯಾಹ್ನ ಆಸ್ಪತ್ರೆಯಲ್ಲಿ ಈ ಸಂಬಂಧ ದೊಡ್ಡ ಗಲಾಟೆ ನಡೆಯಿತೆಂದೂ, ಅಪಮಾನಿತ ಮಹಿಳೆಯ ಗಂಡ ವೈದ್ಯರನ್ನು ಸಮಜಾಯಿಷಿ ನೀಡುವಂತೆ ಕೇಳಿ ದೊಡ್ಡ ಗಲಾಟೆ ಎಬ್ಬಿಸಿ ರೇಗಾಡಿದರೂ ವೈದ್ಯರು ಏನೂ ಉತ್ತರ ಕೊಡದೆ ಸುಮ್ಮನೇ ಕೂತಿದ್ದರೆಂದೂ ಊರಿನವರು ತಿಳಿಸಿದರು.

ಈ ರೀತಿಯ ಅಸಭ್ಯ ವರ್ತನೆಯ ಬಗ್ಗೆ ಈವರೆಗೂ ಹಲವು 'ಗುಸು-ಗುಸು' ಇದ್ದರೂ ಈ ರೀತಿ ಬಯಲಿಗೆ ಬಂದಿರಲಿಲ್ಲವೆಂದೂ, ಇಷ್ಟೇ ಅಲ್ಲದೆ ಆಸ್ಪತ್ರೆಯ ಕೆಲಸದ ವೇಳೆಯಲ್ಲೂ ಇವರು ಇಡೀ ದಿನ ಕಂಠಮಟ್ಟ ಕುಡಿದಿರುತ್ತಾರೆಂದೂ ಊರವರು ತಿಳಿಸಿದರು.

ವೈದ್ಯರ ಪ್ರತಿಕ್ರಿಯೆ

ಈ ಬಗ್ಗೆ ವೈದ್ಯರಾದ ಎ. ಜಿ. ಹೆಗ್ಗಡೆಯವರನ್ನು ವಿಚಾರಿಸಿದಾಗ, "ಗಲಾಟೆ ನಡೆದದ್ದು ನಿಜ. ರೋಗಿಯ ಗಂಡ ಬಾಯಿಗೆ ಬಂದಂತೆ ಸಾರ್ವಜನಿಕರ ಎದುರು ಕೂಗಾಡಿದರು. ಆದರೆ ಯಾಕೆ ಹಾಗೆ ಮಾಡಿದರೆಂದು ನನಗೆ ಗೊತ್ತಿಲ್ಲ. ನಾನೇನೂ ಅಸಭ್ಯನಾಗಿ ವರ್ತಿಸಲಿಲ್ಲ" ಎಂದರಲ್ಲದೆ, ಆದಿನ ಉಪಾಕರ್ಮವಿದ್ದುದರಿಂದ ತಾವು ಮಧ್ಯಾಹ್ನ ೧.೩ ಗಂಟೆಗೇ ಆಸ್ಪತ್ರೆ ಬಾಗಿಲು ಹಾಕಿ ಮನೆಗೆ ಹೋಗಿ ಹಣ್ಣುಕಾಯಿ ತೆಗೆದುಕೊಂಡು, ರಾತ್ರಿ ಪಾಳಿಯ ಕಾವಲಿನೊಂದಿಗೆ ದೇವಸ್ಥಾನಕ್ಕೆ ಹೋಗಿದ್ದಾಗಿ ತಿಳಿಸಿದರು.

(ಆದರೆ, ವೈದ್ಯರು ಮಗನನ್ನು ದೇವಸ್ಥಾನದಲ್ಲಿ ಬಿಟ್ಟು ತನ್ನೊಂದಿಗೆ ಹಿಂದೆಬರುತ್ತಾ ಸಿಗರೇಟು ತರುವಂತೆ ತನ್ನನ್ನು ಬೀದರ ಗೋಡಿಗೆ ಕಳಿಸಿದ್ದಾಗಿ ಖಾಸಿಂ ಹೇಳಿದರು.)

"ಸಾರ್ವಜನಿಕವಾಗಿ ಅಷ್ಟು ಗಲಾಟೆ ಮಾಡಿದಾಗ, ನಿಮ್ಮದೇನೂ ತಪ್ಪಿಲ್ಲದಿದ್ದರೆ ನೀವು ಪೋಲೀಸರಿಗೆ ದೂರು ಕೊಡಬಹುದಿತ್ತಲ್ಲ?" ಎಂಬ ಪ್ರಶ್ನೆಗೆ ಸ್ವಲ್ಪ ಯೋಚಿಸಿದ ವೈದ್ಯರು, "ಹೌದಲ್ವ? ನನಗೆ ಅದು ಹೊಳೆಯಲೇ ಇಲ್ಲ" ಎಂದರು.

ಬುದ್ಧಿ ಭ್ರಮಣೆ?

"ರೋಗಿಗೆ ಡೈಜಿಪಾಮ್ ಕಂಪೋಸ್ ಎಂಬ ಇಂಜೆಕ್ಷನ್ ಕೊಟ್ಟಿದ್ದೆ. ಅದು ಆಕೆಯ ದೇಹದೊಳಗೆ ಸರಿಯಾಗಿ ಹೊಂದಿಕೊಳ್ಳದಿದ್ದರೆ, ಅದರ ಪ್ರತಿಕ್ರಿಯೆಯಾಗಿ ರೋಗಿಗೆ ತಾತ್ಕಾಲಿಕವಾಗಿ ಬುದ್ಧಿಭ್ರಮಣೆಯ ರೀತಿ ಆಗಬಲ್ಲುದು. ಅದರಿಂದೇನಾದರೂ ಈ ಮಹಿಳೆಗೆ ಏನಾದರೂ ಭ್ರಮೆ ಹುಟ್ಟಿ ಈ ಗಲಾಟೆಗೆ ಕಾರಣವಾಗಿರಬಹುದು" ಎಂದು ವೈದ್ಯರು ತಿಳಿಸಿದರು.

ಆದರೆ ವೈದ್ಯಕೀಯ ತಜ್ಞರ ಅಭಿಪ್ರಾಯದಂತೆ ಕೇವಲ ಒಂದು ಡೈಜೀಪಾಮ್ ಇಂಜೆಕ್ಷನ್‌ನಿಂದ ಅಂಥ ಯಾವ ಪರಿಣಾಮಗಳೂ ಆಗುವುದಿಲ್ಲ. ವಾಸ್ತವವಾಗಿ ಆ ಔಷಧವನ್ನು ಹಲವಾರು ಸಂದರ್ಭಗಳಲ್ಲಿ ಮನಸ್ಸಿನ ಉದ್ವಿಗ್ನತೆ ಕಮ್ಮಿಮಾಡಲು, ನೋವು ಕಮ್ಮಿಮಾಡಲು ಅಥವಾ ಅರಿವ...

(ಮುಂದಿನ ಪುಟಕ್ಕೆ)

ಬಿಳೀ ಗುಮ್ಮ!

(ನಮ್ಮ ಪ್ರತಿನಿಧಿಯಿಂದ)

ಬೇಗಾರು: ಇಲ್ಲಿಗೆ ಸಮೀಪದ ಬೇಗಾರು ಕೈಮರದಲ್ಲಿ ಮೂರು ರಸ್ತೆಗಳು ಕೂಡುವಲ್ಲಿನ ಮೂರು ಮೂಲೆ ಕಟ್ಟೆಗೆ ಸೂಚಿಫಲಕವನ್ನು ಬರೆಯದೆ, ಬರೀ ಬಿಳಿ ಬಣ್ಣ ಹಚ್ಚಿಟ್ಟು ಒಂದು ವರ್ಷದ ಮೇಲಾಯಿತು. ಇದಕ್ಕೆ ಸಂಬಂಧಪಟ್ಟ ಲೋಕೋಪಯೋಗಿ ಅಧಿಕಾರಿಗಳು ಈ ಮಾರ್ಗವಾಗಿ ಹಲವು ಸಾರಿ ಓಡಾಡಿರಬಹುದು. ಆದರೂ ಸೂಚಿಫಲಕ ಮಾತ್ರ ಬಂದಿಲ್ಲ.

ಈಗ ಬೇಗಾರು ಸೇತುವೆ ಮುರಿದು ವಾಹನ ಸಂಚಾರಕ್ಕೆ ಅಡಚಣೆಯಾಗಿರುವುದರಿಂದ ಇಲ್ಲಿ ಓಡಾಡುವ ವಾಹನಗಳಿಗೆ ಸೂಚಿಫಲಕವಿಲ್ಲದ್ದು ದೊಡ್ಡ ತೊಂದರೆಯೇ. ಇನ್ನಾದರೂ ಈ ಬೋಳುಕಟ್ಟೆಯ ಬಿಳೀ ಗುಮ್ಮನಿಗೆ ಸದ್ಗತಿ ದೊರೆತೀತೆ? ಎಂಬುದು ಊರವರ ಪ್ರಶ್ನೆಯಾಗಿದೆ.

ಗಣಪತಿ ಹಬ್ಬದ ಉತ್ಸವಗಳು

ಕಾಚಕಲ್

ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣಪತಿ ವಿಸರ್ಜನೆ ಕಾರ್ಯಕ್ರಮ ಆ.೩೦ ರಂದು ತಾ. ಅ. ಮಂ. ಸದಸ್ಯ ಬಿ. ಆರ್ ಪರಮೇಶ್ವರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೊಪ್ಪ ತಾ॥ ಯುವ ಕಾಂಗ್ರೆ ಅಧ್ಯಕ್ಷ ಹೆಚ್. ಎಂ. ಶ್ರೀಧರ್ ಮತ್ತು ತೋಟದಕೊಪ್ಪ ಹೆಚ್. ಹರೀಶ್ ಅವರುಗಳು ಮುಖ್ಯ ಅತಿಥಿಗಳಾಗಿದ್ದರು. ಶಾಲಾ ಮಕ್ಕಳಿಂದ ಮನರಂಜನೆ ನಡೆಯಿತು. ಟೆಲ್ಲರಿನಲ್ಲಿ ವಿಘ್ನೇಶ್ವರನ ಮೆರವಣಿಗೆ ಮಾಡಿ ವಿಸರ್ಜಿಸಲಾಯ್ತು.

ಅಗಳಗಂಡಿ

ಆ. ೨೨ ರಿಂದ ಇಲ್ಲಿನ ಶಾಲಾ ಆವರಣದಲ್ಲಿ ೫ ದಿನ ನಡೆದ ಗಣಪತಿ ಉತ್ಸವ ಆ. ೨೬ ರಂದು ಮುಕ್ತಾಯಗೊಂಡಿತು. ಸಮಿತಿಯ ಅಧ್ಯಕ್ಷರಾದ ಕೆರೆಮನೆ ತಿಮ್ಮಪ್ಪಯ್ಯ ಹಾಗೂ ಪಂಚಾಯ್ತಿ ಅಧ್ಯಕ್ಷ ಹೆಚ್. ಟಿ. ರಾಮಪ್ಪಗೌಡ ಉತ್ಸವಗಳ ನೇತೃತ್ವ ವಹಿಸಿದ್ದರು.

ದಯುಂಬಳ್ಳಿ

ಶಾಲಾಭಿವೃದ್ಧಿ ಸಮಿತಿ ಮತ್ತು ರೈತ ಸಂಘಗಳ ಸಂಯುಕ್ತ ಆಶ್ರಯದಲ್ಲಿ ೩ ದಿನಗಳ ಕಾಲ ದಯುಂಬಳ್ಳಿಯ ಗಣಪತಿ ಉತ್ಸವ ಬಾಳೆಮನೆ ಹಾಲಪ್ಪಗೌಡರ ಮುಂದಾಳತ್ವದಲ್ಲಿ ನಡೆಯಿತು.

ಹರಿಹರಪುರ

ಇಲ್ಲಿನ ಗೆಳೆಯರ ಬಳಗದ ಆಶ್ರಯದಲ್ಲಿ ಪ್ರತಿಷ್ಠಾಪಿಸಿದ ಶ್ರೀ ಗಣೇಶನ ವಿಸರ್ಜನಾ ಸಮಾರಂಭವು ಆ. ೨೭ರಂದು ವಿಜೃಂಭಣೆಯಿಂದ ಬೀದಿ ಮೆರವಣಿಗೆಯೊಂದಿಗೆ ನಡೆಯಿತು.

ಬಾಳೆಹೊಳೆ: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಳೆಹೊಳೆ ಯುವಕ ಸಂಘದ ವತಿಯಿಂದ ಶ್ರೀ ಮಹಾ ಗಣಪತಿಯನ್ನು ಪ್ರತಿಷ್ಠಾಪಿಸಿ ಐದು ದಿನಗಳ ಪರ್ಯಂತ ಕಾವ್ಯವಾಚನ, ಸಂಗೀತ ಕಛೇರಿ, ಯಕ್ಷಗಾನ ಬಯಲಾಟ, ರಸಮಂಜರಿ, ಕಾಲಕ್ಷೇಪ ಮುಂತಾದ ಕಾರ್ಯಕ್ರಮಗಳು ನಡೆದವು. ಆ. ೨೭ರಂದು ಶ್ರೀ ಮಹಾ ಗಣಪತಿಯನ್ನು ರಾಜಬೀದಿ ಮೆರವಣಿಗೆ ಮಾಡಿ ಭದ್ರಾನದಿಯಲ್ಲಿ ವಿಸರ್ಜಿಸಲಾಯಿತು. ಮೆರವಣಿಗೆಯಲ್ಲಿ ಗಜರಾಜನ ಮೇಲೆ ಭಗವಧ್ವಜವನ್ನು ಹಾರಿಸಲಾಗಿತ್ತು. ಕಾರ್ಯಕ್ರಮದ ನೇತೃತ್ವವನ್ನು ಯುವಕ ಸಂಘದ ಅಧ್ಯಕ್ಷ ವೆಂಕಟಸುಬ್ಬಯ್ಯ ಮತ್ತು ಕಾರ್ಯದರ್ಶಿ ಜಿ. ಎಸ್. ಭಾಸ್ಕರ ರಾವ್ ವಹಿಸಿದ್ದರು.

ವಿಷಾದನೀಯ ನಡತೆ

(೧ನೇ ಪುಟದಿಂದ)

ಇದೇ ಅಧ್ಯಾಪಕರಮೇಲೆ ವಿದ್ಯಾರ್ಥಿ ಸಂಘದ ಸ್ವಲ್ಪ ಹಣವನ್ನು ದುರುಪಯೋಗ ಪಡಿಸಿದರೆಂಬ ದೂರನ್ನೂ ಸಹ ಗ್ರಾಮಸ್ಥರು ಇಲಾಖೆಗೆ ನೀಡಿದ್ದಾರೆಂದು ಗೊತ್ತಾಗಿದೆ. ಅಲ್ಲದೆ ಇಸ್ಪೀಟು ಆಟದ ಬಗೆಗಿನ ಮೊಕದ್ದಮೆ ಇನ್ನೂ ನಡೆಯುತ್ತಿರುವುದಾಗಿ ಹೇಳಲಾಗಿದೆ.

ನಮ್ಮ ಪ್ರತಿನಿಧಿ ಅವರನ್ನು ಭೇಟಿ ಮಾಡಿದಾಗ ಆರೋಪಗಳನ್ನು ಅಲ್ಲಗಳೆದ ಅವರು ಹೆಚ್ಚೇನೂ ಪ್ರತಿಕ್ರಿಯೆ ವ್ಯಕ್ತ ಪಡಿಸಲಿಲ್ಲ.

ಸಹಾಯಕ ಶಿಕ್ಷಣಾಧಿಕಾರಿಯಿಂದ ಸಮರ್ಥನೆ

ದೂರುಗಳು ಬಂದಿರುವುದು ನಿಜವೆಂದ ಕೊಪ್ಪದ ಸಹಾಯಕ ಶಿಕ್ಷಣಾಧಿಕಾರಿಗಳು, "ಆದರೆ ಆತ ಹಣ ದುರುಪಯೋಗ ಮಾಡಿಲ್ಲ" ಎಂದರು. ಹರಿಹರಪುರಕ್ಕೆ ತಾತ್ಕಾಲಿಕ ವರ್ಗಾವಣೆ ಮಾಡಿದ್ದಕ್ಕೆ ಅವರು ನೀಡುವ ಕಾರಣಗಳು:

(೧) "ಇಲ್ಲಿನ ಮುಖ್ಯೋಪಾಧ್ಯಾಯರು ಶಿಸ್ತಿನ ವ್ಯಕ್ತಿ." (ಅಥಾತ್ ಹೊಸಕೊಪ್ಪದ ಮುಖ್ಯೋಪಾಧ್ಯಾಯರು 'ಸಡಿಲ ವ್ಯಕ್ತಿ'?)

(೨) ಆಪಾದನೆಯ ಮೂಲಾಂಶ 'ಹುಡುಗಿಯರ ಜೊತೆ ಅಸಭ್ಯ ವರ್ತನೆ'. ಈಗ ನಿಯೋಜಿಸಿರುವ ಶಾಲೆ 'ಹುಡುಗರ ಶಾಲೆ'

ಈ ರೀತಿಯ ನಿಯೋಜನೆಯಲ್ಲಿ 'ಒಳ ವ್ಯವಹಾರ'ವೇನೂ ಇಲ್ಲವೆಂದು ಸ॥ಶಿಕ್ಷಣಾಧಿಕಾರಿಗಳು ತಿಳಿಸಿದರು.

ಸ್ವಾತಂತ್ರ್ಯೋತ್ಸವ

ಅಗಳಗಂಡಿ: ಇಲ್ಲಿನ ಗ್ರಾಮ ಪಂಚಾಯ್ತಿ ಮತ್ತು ಶಾಲಾಭಿವೃದ್ಧಿ ಸಮಿತಿಗಳ ವತಿಯಿಂದ ಆ. ೧೫ ರಂದು ಭಾರತದ ೩೬ ನೇ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಪಂಚಾಯ್ತಿ ಅಧ್ಯಕ್ಷ ಹೆಚ್. ಟಿ. ರಾಮಪ್ಪಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಬಡಮಕ್ಕಳಿಗೆ ಬಟ್ಟೆಗಳನ್ನು ಹಂಚಲಾಯಿತು.

ಬೇಗಾರು ಸರ್ಕಾರಿ ಆಸ್ಪತ್ರೆಯ ವೈದ್ಯರ ವಿರುದ್ಧ ಆರೋಪ

(ಹಿಂದಿನ ಪುಟದಿಂದ)

ಶನ್‌ಗೆ ಮೊದಲು ಸಣ್ಣದಾಗಿ ಪ್ರಜ್ಞೆ ತಪ್ಪಿಸಲು-ರೋಗಿಗೆ ಹಲವು ರೀತಿಯಲ್ಲಿ **ಅತ್ಯಂತ ಕ್ಷೇಮಕರವಾದ** ಔಷಧಿಯೆಂದು ಕೊಡಲಾಗುತ್ತಿದೆ. ಸಾಮಾನ್ಯವಾಗಿ ಅದರಿಂದ ಬುದ್ಧಿಭ್ರಮಣೆಯಂಥ ಪರಿಣಾಮ ಉಂಟಾಗುವುದು ಅಸಾಧ್ಯ.

'ಬುದ್ಧಿವಂತರು'....

ಹೆಗ್ಡೆಯವರು ವೈದ್ಯಕೀಯವಾಗಿ ಬಹಳ ಬುದ್ಧಿವಂತರೆಂದೂ, ಹೊರಗಡೆಗೆ (ಮಣಿಪಾಲ, ಶಿವಮೊಗ್ಗ, ಮೈಸೂರೆ) ಹೋಗಬೇಕಾಗಿದ್ದ ಎಷ್ಟೋ ಪ್ರಕರಣಗಳಲ್ಲೂ ತಾವೇ ಚಿಕಿತ್ಸೆ ಮಾಡಿ ಗುಣಪಡಿಸಿದ್ದುಂಟೆಂದೂ ಊರವರು ಹೇಳುತ್ತಾರೆ. ಲಂಚದ ಆಸೆ ಇಲ್ಲದೆ, ಆಸ್ಪತ್ರೆಯಲ್ಲಿರುವ ಔಷಧಿಯನ್ನು ನಿರ್ವಂಚನೆಯಿಂದ ಕೊಡುತ್ತಿದ್ದರು ಎಂದೂ ಹೇಳುತ್ತಾರೆ. ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಯಲ್ಲಿ ೧೯೮೦-೮೧ ರಲ್ಲಿ ಇವರು ಜಿಲ್ಲೆಗೇ ಪ್ರಥಮಸ್ಥಾನ ಗಳಿಸಿದ್ದರು. ಇರುವ ಅಲ್ಪ ಸ್ವಲ್ಪ ಸೌಲಭ್ಯದಲ್ಲೇ ಇವರು ಹಲವಾರು ಸಲ ಕುಟುಂಬಯೋಜನಾ ಶಸ್ತ್ರಚಿಕಿತ್ಸಾ ಶಿಬಿರ ಏರ್ಪಡಿಸಿದ್ದರು.

ಮುಖಂಡರ ಚಿಂತೆ

ಇಂಥ ಸಮರ್ಥ ವೈದ್ಯರ ಮೇಲೆ ಹೀಗೆಲ್ಲ ದುಷ್ಕೃಟಗಳ ದೂರುಗಳು ಪದೇ ಪದೇ ಬರುತ್ತಿರುವುದು ಶೃಂಗೇರಿ ತಾಲೂಕಿನ ಕೆಲವು ಮುಖಂಡರಿಗೆ ಚಿಂತೆಯಾಗಿದೆ ಎನ್ನಲಾಗಿದೆ. ಈ ದೂರುಗಳ ಬಗ್ಗೆ ಸರಿಯಾದ ಮಟ್ಟದಲ್ಲಿ ಸರಿಯಾದ ರೀತಿ ತನಿಖೆ ನಡೆದರೆ ವೈದ್ಯರ ಉದ್ಯೋಗವೇ ಹೋಗುವ ಭಯವಿದೆಯಂತೆ. ಆದ್ದರಿಂದ ತೆಗೆದುಕೊಳ್ಳುವ ಕ್ರಮದಿಂದ "ರೋಗ ಮಾತ್ರ ಹೋಗಬೇಕು, ರೋಗಿ ಉಳಿಯಬೇಕು" ಎಂಬಂತೆ ಈ ವೈದ್ಯರ ಈ 'ಗುಣ'ಗಳಷ್ಟೇ ಹೋಗಿ, ಅವರು ಇಲ್ಲೇ ಉಳಿಯುವಂತೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಈ ಮುಖಂಡರು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.

ಬಾಲವಿಕಾಸ ಯೋಜನಾಧಿಕಾರಿಗಳ ಕಛೇರಿ,
ಕೊಪ್ಪ ತಾಲ್ಲೂಕು.

ಕೊಪ್ಪ, ದಿನಾಂಕ 30ನೇ ಆಗಸ್ಟ್ 1982.
ಕೇರ್ ಆಫ್: ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ, ಕೊಪ್ಪ.

ಪ್ರಕಟಣೆ

ಕೊಪ್ಪ ತಾಲ್ಲೂಕಿನಲ್ಲಿ ಒಂದುನೂರು ಅಂಗನವಾಡಿ ಕೇಂದ್ರಗಳನ್ನು (ಶಿಶು ವಿಹಾರಗಳನ್ನು) ತೆರೆಯಲು ಸರ್ಕಾರದಿಂದ ಯೋಜನೆಯು ಮಂಜೂರು ಆಗಿದ್ದು ಒಂದುನೂರು ಅಂಗನವಾಡಿ ಕಾರ್ಯಕರ್ತೆಯರು (ಶಿಕ್ಷಕಿಯರು) ಬೇಕಾಗಿರುತ್ತಾರೆ. ಆದುದರಿಂದ ಇಷ್ಟವುಳ್ಳವರು ನಿಯಮಿತ ಅರ್ಜಿ ಫಾರಂಗಳನ್ನು ಈ ಕಛೇರಿಯಿಂದ ಪಡೆಯತಕ್ಕದ್ದು. ದಿನಾಂಕ 8-9-1982ನೇ ಬುಧವಾರ ಅಪರಾಹ್ನ 3-00 ಗಂಟೆ ಒಳಗಾಗಿ ಅರ್ಜಿಗಳನ್ನು ತಲುಪುವಂತೆ ಕಳಿಸತಕ್ಕದ್ದು. ಅಂಗನವಾಡಿ ಕಾರ್ಯಕರ್ತೆಯರ (ಶಿಕ್ಷಕಿಯರ) ಹುದ್ದೆಗೆ ಅರ್ಜಿ ಸಲ್ಲಿಸುವವರ ವಿದ್ಯಾರ್ಹತೆ ಕನಿಷ್ಠ ಪಕ್ಷ 8ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ. ಆದವರಿಗೆ ಮಾಹೆಯಾನ 175/-ರೂ. ಕೊಡಲಾಗುವುದು. 8ನೇ ತರಗತಿ ವಿದ್ಯಾರ್ಹತೆಯುಳ್ಳವರಿಗೆ ಮಾಹೆಯಾನ 125/-ರೂ. ಗಳ ಸಂಭಾವನೆಯನ್ನು ಕೊಡಲಾಗುವುದು.

ವಯೋಮಿತಿಯು 18 ವರ್ಷಗಳಿಗೆ ಮೇಲ್ಪಟ್ಟು ಮತ್ತು 44 ವರ್ಷಗಳಿಗೆ ಒಳಗಿರಬೇಕು. ನಿಮ್ನ ವರ್ಗದ ಅಭ್ಯರ್ಥಿಗಳಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೂ ಆದ್ಯತೆ ಕೊಡಲಾಗುವುದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ತಾರೀಖು 10-9-1982ನೇ ಶುಕ್ರವಾರ ಪೂರ್ವಾಹ್ನ 9-00 ಗಂಟೆಗೆ ಸರಿಯಾಗಿ ಕೊಪ್ಪ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸಭಾಂಗಣದಲ್ಲಿ ಸಂದರ್ಶನಕ್ಕೆ ಆಯ್ಕೆ ಸಮಿತಿಯ ಎದುರು ವಿದ್ಯಾರ್ಹತೆ ಮತ್ತು ವಯಸ್ಸಿನ ಬಗ್ಗೆ ಅಸಲು ದಾಖಲಾತಿ ಪತ್ರಗಳ ಜತೆ ಹಾಜರಾಗತಕ್ಕದ್ದು.

ಸಂದರ್ಶನಕ್ಕೆ ಪ್ರತ್ಯೇಕ ತಿಳುವಳಿಕೆ ಪತ್ರ ಕಳಿಸಲಾಗುವುದಿಲ್ಲ.

(ಸಹಿ) **ಕೆ. ಟಿ. ಬೋರಯ್ಯ,**
ಬಾಲವಿಕಾಸ ಯೋಜನಾಧಿಕಾರಿಗಳು, ಕೊಪ್ಪ.